ದಿನಾಂಕಃ 22-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ನಿಪಿ-11 ರಲ್ಲಿ ಈ ನ್ಯಾಯಾಲಯದ ದಾವಾಸ್ತಿ ಕುರಿತು ವಿಚಾರಣೆ ಬಾಕಿ ಇರುವ ಬಗ್ಗೆ ನಮೂದಿಸಿರುತ್ತೇನೆ. ನಿಪಿ-11 ರಲ್ಲಿ ಆ ರೀತಿ ಯಾವುದೇ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಈ ನ್ಯಾಯಾಲಯದಲ್ಲಿ ಬಾಕಿ ಇರುವ ಈ ದಾವೆಯನ್ನು ಮರೆಮಾಚಿ ನಿಪಿ-11 ರಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಿಂದ ಆದೇಶ ಪಡೆದಿರುತ್ತೇವೆ ಎಂದರೆ ಸರಿ. ನಿಪಿ-11 ರ ಆದೇಶಕ್ಕೂ ಪೂರ್ವ ಪ್ರತಿವಾದಿಗಳ ವಿರುದ್ದ ಯಾವುದೇ ನೋಟಿಸನ್ನು ಜಾರಿಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-11 ರಂತೆ ದಾವೆ ದಾಖಲಿಸುವ ಸಮಯಕ್ಕೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಈ ದಾವೆಯ ದಾವಾಸ್ತಿಯ ಖಾತೆ ಮತ್ತು ಪಹಣಿ ಚಾಲ್ತಿಯಲ್ಲಿದ್ದವು ಎಂದರೆ ಸರಿಯಲ್ಲ. 2021 ರ ಖಾತೆ 2 ನೇ ಪ್ರತಿವಾದಿ ಹೆಸರಿಗೆ ಬಂದ ನಂತರದಲ್ಲಿ 2022 ರಲ್ಲಿ ನಾನು ಸದರಿ ಖಾತೆಯನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿದ್ದೆನೆ ಎಂದರೆ ಸರಿ. 2022 ರಲ್ಲಿ ದಾವಾಸ್ತಿಯ ಖಾತೆ 2 ನೇ ಪ್ರತಿವಾದಿಯ ಹೆಸರಿಗೆ ಇತ್ತು ಎಂದರೆ ಸರಿಯಲ್ಲ.

ನಿಪಿ-7 ರ ಪ್ರಕಾರ ಆದ ರಾಜಿ ಡಿಕ್ರಿಯಂತೆ ಬಂದಂತಹ 1 ಎಕರೆ 13 ಗುಂಟೆ ಆಸ್ತಿ ನನಗೆ, ನನ್ನ ತಂದೆ ತಾಯಿಯಾದ ನಾಗೇಂದ್ರಪ್ಪ ಮತ್ತು ಪಾರ್ವತಮ್ಮ ಹೆಸರಿಗೆ ಜಂಟಿಯಾಗಿ ಬಂದಿದೆ ಎಂದರೆ ಸರಿ. ಹಾಗಾಗಿ ಸದರಿ 1 ಎಕರೆ 13 ಗುಂಟೆ ಆಸ್ತಿಗೆ ನಾನು ಸಂಪೂರ್ಣ ಹಕ್ಕುದಾರನಲ್ಲ ಎಂದರೆ ಸರಿ. ಸದರಿ 1 ಎಕರೆ 13 ಗುಂಟೆ ಆಸ್ತಿಯಲ್ಲಿ ನನ್ನ ತಂದೆಗೂ ಸಹ ಹಿಸ್ಸಾ ಹಕ್ಕು ಇದೆ ಎಂದರೆ ಸರಿ. ನನ್ನ ತಂದೆಗೆ ನಾನು ಮತ್ತು 1 ನೇ ಪ್ರತಿವಾದಿಯ ಗಂಡನಾದ ಬಸವರಾಜಪ್ಪ ಯಾನೇ ಮಂಜುನಾಥ ಮತ್ತು ನನ್ನ ಅಕ್ಕನಾದ ರತ್ನಮ್ಮರವರು ವಾರಸುದಾರರು ಎಂದರೆ ಸರಿ. ಹಾಗಾಗಿ ಸದರಿ ದಾವಾಸ್ತಿಯಲ್ಲಿ ನಮಗೆ ತಲಾ 17 ವರೆ ಗುಂಟೆಯಂತೆ ಸಮನಾದ ಹಿಸ್ಸಾ ಹಕ್ಕು ಇದೆ ಎಂದರೆ ಸರಿ. ನನ್ನ ತಂದೆ ಜೀವಂತವಿರುವ ಕಾಲಕ್ಕೆ ಸದರಿ ದಾವಾಸ್ತಿಯನ್ನು ಯಾವುದೇ ರೀತಿ ವಿಲೇ ಮಾಡಿರುವುದಿಲ್ಲ. ಹಾಗಾಗಿ ದಾವಾಸ್ತಿಯಲ್ಲಿ ನನಗೆ ಮತ್ತು ನನ್ನ ತಂದೆಗೆ ಮತ್ತು ನನ್ನ ಅಕ್ಕನಿಗೆ ಮತ್ತು 1 ನೇ ಪ್ರತಿವಾದಿಯ ಗಂಡನಿಗೆ ಹಿಸ್ಸಾ ಹಕ್ಕು ಇದೆ ಎಂದರೆ ಸರಿ. ನಮ್ಮತಂದೆಗೆ ಬಂದ 17 ವರೆ ಗುಂಟೆ ಆಸ್ತಿಯಲ್ಲಿ ನನಗೆ, ನನ್ನ ತಾಯಿಗೆ ಮತ್ತು 1 ಮತ್ತು 2 ನೇ ಪ್ರತಿವಾದಿಗೆ ಸಮಾನದ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ.

ಹಾಗಾಗಿ ದಾವಾಸ್ತಿ ಬಸವರಾಜಪ್ಪ ಯಾನೇ ಮಂಜುನಾಥರವರ ನಿಡಿ-1 ರಂತೆ ಕ್ರಯಕ್ಕೆ ಕೊಂಡ ಆಸ್ತಿ ಎಂದರೆ ಸರಿಯಲ್ಲ. ಹಾಗಾಗಿ ನಾನು ಹೇಳಿದಂತೆ ನಿಪಿ-7 ರಂತೆ ಯಾವುದೇ ರಾಜಿ ಅರ್ಜಿ ಆಗಿರುವುದಿಲ್ಲ, ಸದರಿ ಅರ್ಜಿಯಂತೆ ಯಾವುದೇ ಖಾತೆ ಪಹಣಿ ಬದಲಾಗಿಲ್ಲ ಎಂದರೆ ಸರಿಯಲ್ಲ. ನಿಪಿ-7 ನ್ನು ಸೃಷ್ಟಿ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ. ನಿಪಿ-11 ಕ್ಕೂ ಪೂರ್ವ ನಮ್ಮ ತಂದೆ ಮರಣ ಹೊಂದಿದ ಕಾರಣ ಸದರಿ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಎಲ್ಲರ ಹೆಸರಿನಲ್ಲೂ ಪೌತಿ ಖಾತೆ ಬದಲಾವಣೆ ಮಾಡಲು ಅವಕಾಶವಿತ್ತು ಎಂದರೆ ಸರಿ. ಆದೇಸಮಯಕ್ಕೆ 1 ನೇ ಪ್ರತಿವಾದಿಯ ಗಂಡನೂ

ಸಹ ಮೃತಪಟ್ಟ ಕಾರಣ ಸದರಿಯವರ ಮರಣ ಪ್ರಮಾಣಪತ್ರವನ್ನು ಕಂದಾಯ ಇಲಾಖೆಗೆ ಹಾಜರಪಡಿಸಿ ಪೌತಿ ಖಾತೆ ಮಾಡಿಸಿಕೊಳ್ಳಲು ನಮಗೇನು ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ನಮಗೆ ಏನು ತಿಳಿಸದಂತೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2019 ರಲ್ಲಿ 1 ನೇ ಪ್ರತಿವಾದಿಯ ಗಂಡ ಮೃತಪಡುವ ಸಮಯಕ್ಕೆ ಪೌತಿಯಾಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳುವ ಸಮಯಕ್ಕೆ ನಾನು ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿ ಮೃತ ಬಸವರಾಜಪ್ಪನ ಸ್ವಯಾರ್ಜಿತ ಆಸಿತಯಾದಕಾರಣ 1 ಮತ್ತು 2 ನೇ ಪ್ರತಿವಾದಿಗಳು ಪೌತಿಯಾಧಾರದ ಮೇಲೆ ಖಾತೆ ಬದಲಾಯಿಸಿಕೊಂಡಿದ್ದು ಅದಕ್ಕೆ ನಾನು ಯಾವುದೇ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.